**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 3391 / 2022**

**ಚಾಸಾ :- 05 / ಪ್ರಾಸಾ :- 04**

| | |
|---|---|
| ಹೆಸರು | ಲೋಕೇಶ್ |
| ತಂದೆ ಹೆಸರು | ಕೆಂಪಯ್ಯ |
| ವಯಸ್ಸು | 46 |
| ಉದ್ಯೋಗ | ನಿರ್ವಾಹಕ |
| ವಿಳಾಸ | ನಾಯಕನಪಾಳ್ಯ, ಮಾಗಡಿ |

**ದಿನಾಂಕಃ 17.01.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 03.03.2022 ರಂದು 3637 ಮಾರ್ಗ ಸಂಖ್ಯೆಯಲ್ಲಿ ಕೊಪ್ಪದಿಂದ ಬಂಗಳೂರಿಗೆ ಕೆಎ 42 ಎಫ್ 1711 ರಲ್ಲಿ ನಿರ್ವಾಹಕನೆಂದು ಕೆಸಲ ನಿರ್ವಹಿಸಲು ನನಗೆ ವರಧಿಯನ್ನು ಕೊಟ್ಟಿದ್ದು ಅದರ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವಾಗ ಹ್ಯಾಂಡ್ ಪೋಸ್ಟ್ ನಿಂದ ಬೆಂಗಳೂರಿಗೆ ಹೋಗಬೇಕಾದಾಗ ಹ್ಯಾಂಡ್ ಪೋಸ್ಟ್ ನಲ್ಲಿ 4-5 ಜನರಿಗೆ ಟಿಕೇಟ್ ಕೊಟ್ಟು ಮುಂದೆ ಬಂದು ನಿಂತಿದ್ದು ನಮ್ಮ ವಾಹನವು ನಿದಾನಕ್ಕೆ ಹೋಗುತ್ತಿದ್ದರೂ ಟಿ ವಿ ಎಸ್ ಎಕ್ಸ್ ಎಲ್ ದ್ವಿಚಕ್ರ ವಾಹನವನ್ನು ಚಲಾವಣೆ ಮಾಡುತ್ತಿದ್ದ ವ್ಯಕ್ತಿಯು ಬಂದು ನಮ್ಮ ಬಸ್ಸಿಗೆ ಟಚ್ ಮಾಡಿ ಕೆಳಗಡೆ ಬಿದ್ದಿರುತ್ತಾರೆ. ಆಗ ನಾವು ಕೆಳಗೆ ಇಳಿದು ನೋಡಿ ಬಸ್ ಸ್ಟಾಂಡ್ ಹತ್ತಿರ ಇದ್ದ 4-5 ಜನಗಳ ಜೊತೆ ಹಾಗೂ ನಮ್ಮ ಚಾಲಕ ರ ಜೊತೆ ಖಾಸಗಿ ಆಟೋದಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ನಂತರ ನಾನು ಘಟಕ ಸ್ಥಾಪಕರಿಗೆ ವಿಷಯ ಮುಟ್ಟಿಸಿ ಬಸ್ಸಿನಲ್ಲಿದ್ದ ಪ್ರಯಾಣಿಕರನ್ನು ಬೇರೆ ವಾಹನಕ್ಕೆ ಹತ್ತಿಸಲು ಅಲ್ಲೇ ಉಳಿದುಕೊಂಡು ಅವರನ್ನು

ಸುರಕ್ಷಿತವಾಗಿ ಬೇರೆ ವಾಹನದಲ್ಲಿ ಕಳುಹಿಸಿರುತ್ತೇನೆ. ನಮ್ಮ ಬಸ್ಸನ್ನು ಪುಟ್ಟರಾಜುರವರು ಚಾಲನೆ ಮಾಡುತ್ತಿದ್ದರು. ಭೈರನಹಳ್ಳಿ ಹತ್ತಿರ ಅಪಘಾತವಾಗಿರುತ್ತದೆ. ನಮ್ಮ ಬಸ್ಸು 30 ಕಿ.ಮೀ. ಸ್ಪೀಡಿನಲ್ಲಿ ಇತ್ತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಿಮ್ಮ ಬಸ್ಸಿನ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆಗ ನಿಮ್ಮ ಬಸ್ಸಿನ ಹಿಂಬದಿ ಚಕ್ರ ಸದರಿ ದ್ವಿಚಕ್ರ ವಾಹನದ ಸವಾರನ ತಲೆಯ ಮೇಲೆ ಹತ್ತಿದ್ದರಿಂದ ಅವರು ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ಚಾಲಕರು ಒಂದೇ ಡಿಪೋದಲ್ಲಿ ಕೆಲಸ ಮಾಡುತ್ತಿರುವುದರಿಂದ ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ-

ಆರೋಪಿ ಪರ ವಕೀಲರು ಪಾಟೀಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**